ಕರ್ನಾಟಕ ಸರ್ಕಾರ
ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ: ಕಾಶಿಇ/22/ನ್ಯಾಕ್.ನೋಟೀಸು/2017-18

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಅರಮನೆ ರಸ್ತೆ, ಬೆಂಗಳೂರು-560001.
ದಿನಾಂಕ: 09.11.2017

## "ಕಾರಣ ಕೇಳುವ ನೋಟೀಸು"

ವಿಷಯ: ಕಾಲೇಜನ್ನು ನ್ಯಾಕ್ ಮರುಮೌಲ್ಯಮಾಪನಕ್ಕೆ ಒಳಪಡಿಸಲು ಯಾವುದೇ ಆಸಕ್ತಿ ತೋರದಿರುವ ಬಗ್ಗೆ.
ಉಲ್ಲೇಖ: ದಿನಾಂಕ: 09.11.2017ರ ನ್ಯಾಕ್ ಸಮನ್ವಯಾಧಿಕಾರಿಗಳ ಸಲ್ಲಿಕೆ.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ನ್ಯಾಕ್ ಸಂಸ್ಥೆಯು ಜುಲೈ 2017ರಿಂದ ಕಾಲೇಜುಗಳ ನ್ಯಾಕ್ ಪ್ರಕ್ರಿಯೆಗೆ ನೂತನ ಪದ್ಧತಿಯನ್ನು ಜಾರಿಗೊಳಿಸಿದೆ. ಈ ಸಂಬಂಧ ಇಲಾಖಾ ವ್ಯಾಪ್ತಿಯ 11 ಕಾಲೇಜುಗಳು ನ್ಯಾಕ್ ಮರುಮೌಲ್ಯಮಾಪನಕ್ಕೆ ಒಳಪಡಲು ಅರ್ಹತೆಯನ್ನು ಹೊಂದಿದ್ದು, ಸದರಿ ಕಾಲೇಜುಗಳಿಗೆ ಅವಶ್ಯವಿರುವ ಅನುದಾನವನ್ನು ಇಲಾಖೆಯಿಂದ ಬಿಡುಗಡೆ ಮಾಡಲಾಗಿರುತ್ತದೆ ಹಾಗೂ ಕಾಲೇಜುಗಳಿಗೆ ಹಲವಾರು ಬಾರಿ ತರಬೇತಿ ಶಿಬಿರಗಳನ್ನು ಕೇಂದ್ರ ಕಛೇರಿಯಲ್ಲಿ ಮತ್ತು ಆಯಾ ಪ್ರಾದೇಶಿಕ ಕಛೇರಿ ವ್ಯಾಪ್ತಿಯಲ್ಲಿ ಹಮ್ಮಿಕೊಳ್ಳಲಾಗಿದೆ.

2017-18ನೇ ಸಾಲಿನಲ್ಲಿ ಕಾಲೇಜುಗಳು ಮರುಮೌಲ್ಯಮಾಪನ ಪ್ರಕ್ರಿಯೆಯ ಮೊದಲ ಹಂತವಾದ IIQA ನ್ನು ಆನ್‌ಲೈನ್ ಮೂಲಕ ಸಲ್ಲಿಸಲು ನವೆಂಬರ್-ಡಿಸೆಂಬರ್ ಎರಡು ಮಾಸದ ಅಲ್ಪಾವಧಿಗೆ ಮಾತ್ರ ಅವಕಾಶವಿದ್ದರೂ ಸಹ ಕೆಳಕಂಡ ಕಾಲೇಜುಗಳ ಪ್ರಾಂಶುಪಾಲರು, ನ್ಯಾಕ್/ಐ.ಕ್ಯೂ.ಎ.ಸಿ ಸಮನ್ವಯಾಧಿಕಾರಿಗಳು ಹಾಗೂ ಸಿಬ್ಬಂಧಿ ವರ್ಗದವರು ತೀವ್ರ ಅನಾಸಕ್ತಿ ಹಾಗೂ ನಿರ್ಲಕ್ಷ್ಯ ಮನೋಭಾವ ಹೊಂದಿರುವುದು ಕಂಡುಬರುತ್ತದೆ. ಈ ಪರಿಣಾಮವಾಗಿ ನ್ಯಾಕ್ ಶ್ರೇಣಿ ಹೊಂದಿರುವುದರಿಂದ ಬರುವಂತಹ ಎಲ್ಲಾ ಸೌಲಭ್ಯಗಳಿಂದ ಸಂಸ್ಥೆಯು ವಂಚಿತವಾಗುತ್ತಿರುವುದಕ್ಕೆ ತಾವು ನೇರ ಹೊಣೆಗಾರರಾಗಿರುತ್ತೀರಿ ಹಾಗೂ ಈ ಪ್ರಕ್ರಿಯೆ ತಮ್ಮ ಕರ್ತವ್ಯಲೋಪವೆಂದು ಪರಿಗಣಿಸಬಹುದಾಗಿರುತ್ತದೆ.

| ಕ್ರ. ಸಂ. | ಕಾಲೇಜಿನ ಹೆಸರು |
|---|---|
| 1. | Government First Grade College, M. G. Road, Chickballapura – 562101 |
| 2. | Government College For Boys, Chintamani, |
| 3. | Government First Grade College, Haliyal, |
| 4. | Government First Grade College, Chamarajanagar |
| 5. | Bashumiyansahukar Government First Grade College , Manvi 584123 Raichur |
| 6. | Government First Grade College Hosadurga 577527 |
| 7. | Government First Grade College Gurmitkal 585214tal. Yadgir, |

| | |
|---|---|
| 8. | S. A. V. T. Government First Grade College Kudligi 563135 Dist. Bellary |
| 9. | Sri. Revanasiddappakanta Government First Grade College , Chittapur 585211Dist. Gulbarga |
| 10. | Government First Grade College, Kushalnagar |
| 11. | Govt. First Grade College, Malur |

ಮೇಲ್ಕಾಣಿಸಿದ ಅಂಶಗಳನ್ನು ಇಲಾಖೆಯು ಗಂಭೀರವಾಗಿ ಪರಿಗಣಿಸಿರುತ್ತದೆ. ಆದುದರಿಂದ ಈ 02 ತಿಂಗಳುಗಳ ಅವಧಿಯಲ್ಲಿ ಕಾಲೇಜಿನ IIQA ನ್ನು ಆನ್‌ಲೈನ್ ಮೂಲಕ ಸಲಿಸಿ. ಉತ್ತೀರ್ಣಗೊಳ್ಳುವ ನಿರ್ಧಾರವನ್ನು ತೀಕ್ಷಣವಾಗಿ ತೆಗೆದುಕೊಳ್ಳಬೇಕೆಂದು ಸೂಚಿಸುತ್ತಾ, ತಪ್ಪಿದಲ್ಲಿ ಮುಂದಿನ ಕ್ರಮಕ್ಕೆ ಕಾಲೇಜಿನ ಪ್ರಾಂಶುಪಾಲರು. ಎಲ್ಲಾ ಬೋಧಕ/ಬೋಧಕೇತರ ಸಿಬ್ಬಂಧಿಗಳು ಜವಾಬ್ದಾರರಾಗಿರುತ್ತೀರಿ. ಆದುದರಿಂದ ಇಲಾಖೆಯಿಂದ ಕಾಲೇಜು ನ್ಯಾಕ್ ಮರುಮೌಲ್ಯಮಾಪನಕ್ಕೆ ಒಳಪಡಲು ಅನುದಾನವನ್ನು ಹಾಗೂ ತರಬೇತಿಗಳನ್ನು ನೀಡಿದ್ದರೂ ಸಹ ಈವರೆವಿಗೆ ಯಾವುದೇ ಕ್ರಮ ಕೈಗೊಳ್ಳದಿರಲು ಕಾರಣವನ್ನು ಹಾಗೂ IIQA ನ್ನು ಆನ್‌ಲೈನ್ ಮೂಲಕ ಸಲ್ಲಿಸಿ. ಮಾನ್ಯತೆ ಸಂಬಂಧ ತೆಗೆದುಕೊಂಡ ಕ್ರಮದ ಬಗ್ಗೆ ವಸ್ತುನಿಷ್ಠ ವರದಿಯನ್ನು ದಿನಾಂಕ: 20.11.2017ರೊಳಗಾಗಿ ಈ ಕಛೇರಿಗೆ ಸಲ್ಲಿಸಲು ಸೂಚಿಸಲಾಗಿದೆ.

ಕಾಲೇಜು ಶಿಕ್ಷಣ ನಿರ್ದೇಶಕರು

ಪ್ರತಿಯನ್ನು:

1. ಸಂಬಂಧಿಸಿದ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ- ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.
2. ಸಂಬಂಧಿಸಿದ ಕಾಲೇಜುಗಳ ಸಿಬ್ಬಂಧಿಗಳಿಗೆ-(ಪ್ರಾಂಶುಪಾಲರ ಮುಖಾಂತರ) ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.
3. ಸಮನ್ವಯಾಧಿಕಾರಿಗಳು, ರಾಜ್ಯ ಗುಣಮಟ್ಟ ಭರವಸಾ ಕೋಶ-ಮಾಹಿತಿಗಾಗಿ
4. ಮಾಹಿತಿ ಅಧಿಕಾರಿಗಳು, ಕೇಂದ್ರ ಕಛೇರಿ-ಮಾಹಿತಿಗಾಗಿ ಹಾಗೂ ಇಲಾಖೆಯ ವೆಬ್-ಸೈಟ್ ನಲ್ಲಿ ಪ್ರಕಟಿಸಲು.
5. ಕಛೇರಿ ಪ್ರತಿ.